**ಕರ್ನಾಟಕ ಸರ್ಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ:ಸಿ1(6)ತಾ.ದೈ.ಶಿ.ಪ/ಮುಂಬಡ್ತಿ/125/2020-21 ದಿನಾಂಕ:15-06-2021

**-:ಜ್ಞಾಪನ:-**

ವಿಷಯ: ಗ್ರೂಪ್-"ಬಿ" ವೃಂದದ ದೈಹಿಕ ಶಿಕ್ಷಣ ಪರೀವಿಕ್ಷಕರು, ಹುದ್ದೆಗೆ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ: ಇಲಾಖಾ ಮುಂಬಡ್ತಿ ಸಮಿತಿ ಸಭೆ ದಿನಾಂಕ:11-06-2021
(ವೆಬ್-ಸೈಟ್ ನಲ್ಲಿ ಪಟ್ಟಿ ಪ್ರಕಟಿಸಲಾಗಿದೆ)

**********************

ಸರ್ಕಾರಿ ಪ್ರೌಢ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯಿಂದ ಗ್ರೂಪ್-"ಬಿ" ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗಳಿಗೆ ಈಗಾಗಲೇ ಉಲ್ಲೇಖಿತ ಇಲಾಖಾ ಮುಂಬಡ್ತಿ ಸಭೆಯಲ್ಲಿ ಅನುಮೋದನೆಯಾಗಿರುವಂತೆ ಪಟ್ಟಿಯನ್ನು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ. ವಿವರಗಳನ್ನು ಅನುಬಂಧಲ್ಲಿ ಲಗತ್ತಿಸಿದೆ. ಸದರಿಯಂತೆ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಬಡ್ತಿಗೆ ಪರಿಗಣಿಸಲಾಗಿರುವ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗಾಗಿ ಗಣಕೀಕೃತ ಕೌನ್ಸಿಲಿಂಗ್ ಅನ್ನು ಕೆಳಗಿನಂತೆ ಹಮ್ಮಿಕೊಂಡಿದೆ.

| ದಿನಾಂಕ | ಕೌನ್ಸಿಲಿಂಗ್ ನಡೆಯುವ ಸ್ಥಳ | ವಿವರ |
|---|---|---|
| 21-06-2021 | ಶಿಕ್ಷಕರ ಸದನ ಕೆ.ಜಿ. ರಸ್ತೆ ಬೆಂಗಳೂರು<br>ಬೆಳಿಗ್ಗೆ 09.00 ಗಂಟೆಯಿಂದ | 1)371ಜೆ ಸ್ಥಳೀಯ ವೃಂದದ ಕ್ರಮ ಸಂಖ್ಯೆ 01 ರಿಂದ 19 ಮತ್ತು<br>2)371ಜೆ ಉಳಿದ ಮೂಲ ವೃಂದದ ಕ್ರಮ ಸಂಖ್ಯೆ:01 ರಿಂದ 04 ರವರೆಗೆ<br>3)ರಾಜ್ಯ ಮಟ್ಟದ ಉಳಿದ ಮೂಲ ವೃಂದದ ಕ್ರಮ ಸಂಖ್ಯೆ 01 ರಿಂದ 50 ರವರೆಗೆ |
| | ಮಧ್ಯಾಹ್ನ 02.00 ಗಂಟೆಯಿಂದ | ರಾಜ್ಯ ಮಟ್ಟದ ಉಳಿದ ಮೂಲ ವೃಂದದ ಕ್ರಮ ಸಂಖ್ಯೆ 51 ರಿಂದ 125 |

**ಸೂಚನೆಗಳು** :

1. ಕೌನ್ಸಿಲಿಂಗ್ ಗೆ ಹಾಜರಾಗುವ ಪ್ರತಿಯೊಬ್ಬ ಶಿಕ್ಷಕರು ಸಂಬಂಧಿಸಿದ ವೇತನ ಸೆಳೆಯುವ ಅಧಿಕಾರಿಗಳಿಂದ ತಮ್ಮ ಭಾವ ಚಿತ್ರ ಸಹಿತ ದೃಢೀಕರಣ ಪ್ರಮಾಣ ಪತ್ರದೊಂದಿಗೆ ಕಡ್ಡಾಯವಾಗಿ ಸೂಚಿಸಿದ ಸಮಯಕ್ಕೆ ತಪ್ಪದೇ ಹಾಜರಾಗತಕ್ಕದ್ದು.

ಹಾಗೂ ಕೌನ್ಸಿಲಿಂಗ್ ನಡೆಯುವ ಸ್ಥಳದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು ಕೈ-ಗವಚ ಹಾಗೂ ಮುಖ-ಕವಚ ಧರಿಸಿಕೊಂಡು ಕೋವಿಡ್-19 ನಿಯಮಗಳನ್ನು ಪಾಲಿಸತಕ್ಕದ್ದು,

2. ಕೌನ್ಸಿಲಿಂಗ್ ಗೆ ಹಾಜರಾಗುವ ಶಿಕ್ಷಕರಿಗೆ ಪ್ರಯಾಣ ಭತ್ಯೆ ಮತ್ತು ಯಾವುದೇ ಇತರೆ ಭತ್ಯೆಗಳನ್ನು ನೀಡಲಾಗುವುದಿಲ್ಲ,
3. ಕೌನ್ಸಿಲಿಂಗ್ ಗೆ ಗೈರು ಹಾಜರಾಗುವ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಗುವುದು.
4. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ18 ಸೇನೌವ 2014 ದಿನಾಂಕ:06-12-2014 ರಂತೆ ಅಂಗವಿಕಲ ನೌಕರರಿಗೆ ಪ್ರಥಮ ಆದ್ಯತೆ ನೀಡಬೇಕಾಗಿದ್ದು, ಪ್ರಯುಕ್ತ ಕೌನ್ಸಿಲಿಂಗ್ ಗೆ ಅಂಗವಿಕಲ ಅಭ್ಯರ್ಥಿಗಳು ಹಾಜರಾಗುವುದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅಂಗವಿಕಲತಾ ಪ್ರಮಾಣ ಪತ್ರವನ್ನು ಸಂಬಂಧಿಸಿದ ಉಪನಿರ್ದೇಶಕರು[ಆಡಳಿತ] ರವರು ಇ-ಮೇಲ್ ಮೂಲಕ est1cpi@gmail.com ಈ ವಿಳಾಸಕ್ಕೆ ದಿನಾಂಕ:16/06/2021ರ ಸಂಜೆ:-5-30ರ ಒಳಗಾಗಿ ತಪ್ಪದೇ ಸಲ್ಲಿಸತಕ್ಕದ್ದು. ನಂತರದಲ್ಲಿ ಸಲ್ಲಿಕೆಯಾಗುವ ಮನವಿಗಳನ್ನು ಪರಿಗಣಿಸುವುದಿಲ್ಲವೆಂದು ತಿಳಿಸಿದೆ.

ಅಡಕ: ಪಟ್ಟಿ

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

**ಡಾ|| ರೂಪಶ್ರೀ ಎಸ್. ಕೆ. ಎ. ಎಸ್.,**
ಜಂಟಿ ನಿರ್ದೇಶಕರು(ಆಡಳಿತ)

ಗೆ,
ಬಡ್ತಿಯಲ್ಲಿರುವ ಸಂಬಂಧಿತ ಶಿಕ್ಷಕರಿಗೆ
(ಇಲಾಖಾ ವೆಬ್ ಸೈಟ್ ಮೂಲಕ)

ಪ್ರತಿ:
1. ನಿರ್ದೇಶಕರು, ಪ್ರೌಢಶಿಕ್ಷಣ,ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು
2. ರಾಜ್ಯದ ಎಲ್ಲಾ ಉಪನಿರ್ದೇಶಕರು[ಆಡಳಿತ] ರವರುಗಳಿಗೆ ರವಾನಿಸುತ್ತಾ ಕೌನ್ಸಿಲಿಂಗ್ ದಿನಾಂಕದ ಬಗ್ಗೆ ವ್ಯಾಪ್ತಿಯ ಎಲ್ಲಾ ಸಂಬಂಧಿತರಿಗೆ ಪ್ರಚುರ ಪಡಿಸಲು ತಿಳಿಸಿ.
3. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ಇವರಿಗೆ ರವಾನಿಸುತ್ತಾ, ಸದರಿ ಕೌನ್ಸಿಲಿಂಗ್ ನಡೆಸಲು ಅಗತ್ಯ ಆನ್-ಲೈನ್ ತಂತ್ರಾಂಶವನ್ನು ಸಜ್ಜುಗೊಳಿಸಲು ಮತ್ತು ಕೌನ್ಸಿಲಿಂಗ್ ದಿನಾಂಕದಂದು ಅಗತ್ಯ ಸಂಖ್ಯೆಯಲ್ಲಿ ಪೂರ್ಣಾವಧಿಗೆ ತಾಂತ್ರಿಕ ಸಿಬ್ಬಂದಿಯನ್ನು ಒದಗಿಸಲು ತಿಳಿಸಿದೆ. ಹಾಗೂ ಕೌನ್ಸಿಲಿಂಗ್ ದಿನಾಂಕದಂದೇ ಬಡ್ತಿ ಆದೇಶಗಳನ್ನು ಸಹ ತಂತ್ರಾಂಶದಲ್ಲಿಯೇ ಜನರೇಟ್ ಮಾಡಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆಯೂ ಕ್ರಮ ವಹಿಸುವುದು.